**ಸಾಕ್ಷಿಯನ್ನು ದಿನಾಂಕಃ- 20-09-2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ- 1 ಮತ್ತು 4ನೇ ಪ್ರತಿವಾದಿ ಪರ ಶ್ರೀ.ಡಿ ಎಂ ಜೆ ವಕೀಲರಿಂದಃ-**

ನಿಡಿ-2 ಮತ್ತು ನಿಡಿ-3 ರ ಮೇಲಿರುವ ಸಹಿಗಳನ್ನು ಪರಿಶೀಲನೆ ಮಾಡಲು ಅಡಮಾನ ಪತ್ರವನ್ನು ಸಹ ಕಳಿಸಿದ್ದರು. ನಿಡಿ-2, ನಿಡಿ-3 ಮತ್ತು ಅಡಮಾನ ಪತ್ರದ ಮೇಲಿರುವ ಸಹಿಗಳ ತಾಳೆ ನೋಡಿ ನಾನು ವರದಿಯನ್ನು ನೀಡಿದ್ದೇನೆ. ಸಾಕ್ಷಿ ವರದಿಯ ದೃಡೀಕೃತ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಡಿ-410 ಎಂದು ಗುರುತಿಸಲಾಗಿದೆ. ನನ್ನ ವರದಿಯಲ್ಲಿ ಅಡಮಾನ ಪತ್ರದಲ್ಲಿ ಸಹಿ ಹಾಕಿರುವ ವ್ಯಕ್ತಿ ನಿಡಿ-1 ಮತ್ತು ನಿಡಿ-2 ರಲ್ಲಿ ಸಹಿಗಳನ್ನು ಹಾಕಿರುವುದಿಲ್ಲ. ಸದರಿ ನಿಡಿ-1 ಮತ್ತು ನಿಡಿ-2 ರಲ್ಲಿ ಇರುವ ಸಹಿಗಳು ನಕಲಿ ಸಹಿಗಳು ಆಗಿರುತ್ತವೆ. ಸದರಿ ದಾಖಲಾತಿಗಳನ್ನು ನಾನು ಇನ್ನೊಮ್ಮೆ ತಾಳೆ ಮಾಡಿದರೂ ಸಹ ಸದರಿ ಫಲಿತಾಂಶ ಬರುತ್ತದೆ.

<u>ಪಾಟೀ ಸವಾಲು:</u> ಪ್ರತಿವಾದಿ ನಂ.2(ಎ) ದಿಂದ 2(ಸಿ) ರ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣಗಳು ಇಲ್ಲ, ಪಾಟೀಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.